ಹೊರಟು ಹೋಗಿದ್ದರು. ಅವರನ್ನೆಲ್ಲಾ ಮಾತಾಡಿಸಿ ಆಗಿತ್ತು.... ತಮ್ಮ ಮಕ್ಕಳಿಗೆ ಬೊಂಬೆ ಮಾಡಿಕೊಡಬಹುದು ಎಂಬ ಆಸೆಗೇ ಹಲವು ಮಹಿಳೆಯರು ಬಂದಿದ್ದರು.. ಹಾಗಾಗಿ ರಿಜಿಸ್ಟರ್ ಮಾಡಿಸಿಕೊಂಡವರು ಇಪ್ಪತ್ತು ಜನರಾದರೆ ಬಂದವರು ಐವತ್ತಕ್ಕೂ ಹೆಚ್ಚು!... ಬೇಸರಿಸಿಕೊಳ್ಳದೆ ಜೊಳ್ಳು, ಗಟ್ಟಿ ಬೇರೆ ಮಾಡಿ ಯಾರಿಗೂ ಬೇಸರವಾಗದಂತೆ ಹೇಳಿಕೊಡುತ್ತಿದ್ದ ವಿಶ್ವಾಸ್ ಎಂದು ಮೀರಾ ವರದಿ ಒಪ್ಪಿಸಿದಳು.

ಪ್ರಾಬ್ಲಂ ಏನಿಲ್ಲ... ನಿಮ್ಮ ಶಿಷ್ಯೆ ಮೀರಾ.. ಮಾತೇ ಆಡಲ್ಲ.... ನಾನೇನೋ ದೊಡ್ಡ ಮಹಾರಾಜನೋ ಇಲ್ಲ ಮಹಾ ವಿಲ್ಲನ್ನೋ ಎಂಬಂತೆ ಮಾರು ದೂರ ನಿಂತು... ತಲೆಯಾಡಿಸುತ್ತಾರೆ. ನರಹರಿನೋ... ಬೇಡ ಬಿಡಿ... ಹೇಳುವುದು ಬೇಡ... ನಂಗೆ ಆಗೊಲ್ಲಾರೀ!

ಈ ಮನುಷ್ಯ ಹುಸಿಕೋಪ ತೋರುತ್ತಿದ್ದಾನೋ.. ಇಲ್ಲ.. ನಿಜವಾಗಿ ಕೋಪಿಸಿಕೊಂಡಿದ್ದಾನೋ.

ಅಲ್ಲ ವಿಶ್ವಾಸ್.... ಪ್ರೀತಿ ಏನು ಹೇಳಿದ್ಲೂ ಏನೋ ನಂಗೆ ಗೊತ್ತಿಲ್ಲ... ನಾನು ಇದೆಲ್ಲಾ ಆರ್ಗನೈಸ್ ಮಾಡ್ತಿನಾಗಲೀ.. ನಿತ್ಯ ಬಂದು ಕುಳಿತುಕೊಳ್ಳುವುದಿಲ್ಲ.. ಅದಕ್ಕಾಗಿಯೇ ಮೀರಾ ಇರುವುದು.. ಹೇಳಿಕೊಡುವವರ, ಕಲಿತುಕೊಳ್ಳುವವರ ಅವಶ್ಯಕತೆಗಳನ್ನು ನೋಡಿಕೊಳ್ಳಲೇ ಅವಳನ್ನು ನೇಮಿಸಿಕೊಂಡಿದ್ದೇನೆ. ಓಡಾಟಕ್ಕೆ ನರಹರಿ ಇರ್ತಾನೆ. ನಂಗೆ ನನ್ನ ಸಂಸಾರ, ಮನೆ, ಮಕ್ಕಳು ಮುಖ್ಯ.. ನಾಲ್ಕು ಜನಕ್ಕೆ, ಅದರಲ್ಲೂ ಮಹಿಳೆಯರಿಗೆ ಅನುಕೂಲವಾಗಲಿ ಎಂದಷ್ಟೇ ನನ್ನ ಉದ್ದೇಶ, ಸ್ನೇಹ ಮಾಡಿಕೊಳ್ಳಲು ಒಂದು.

ಲೆವಲ್ ಇರಬೇಕು ಅಂತೀರಾ?.. ನಂಗೆ ನಿಮ್ಮ ಸ್ನೇಹಿತವಾಗುವ ಯೋಗ್ಯತೆ ಇಲ್ಲ ಅಂತಿರಾ?... ರೀ ಮೇಡಂ... ನಾಲ್ಕು ಜನಕ್ಕೆ ಉಪಕಾರವಾಗಲಿ ಅಂತ ನಾನು ಬೊಂಬೆ ಮಾಡುವುದು ಹೇಳಿಕೊಡುವುದಿಲ್ಲ.. ನಂಗೆ ಇದರಿಂದ ಲಾಭವಿದೆ ಎಂದು ಕೂಡ ಅಲ್ಲ... ನಾನು...

ವಿಶ್ವಾಸ್!... ಪ್ಲೀಸ್.. ಲೆವಲ್ಲು.. ಲಾಭ, ಯೋಗ್ಯತೆ ಅಂತೆಲ್ಲಾ ಮಾತಾಡಬೇಡಿ..... ಪ್ರೀತಿ ನನ್ನ ಕಾಲೇಜು ಸ್ನೇಹಿತೆ. ಆಗ ನಾನು ಇದ್ದಿದ್ದಕ್ಕೂ ಈಗ ಇರುವುದಕ್ಕೂ ತುಂಬಾ ವ್ಯತ್ಯಾಸವಿದೆ. ಹದಿನೈದು ವರ್ಷಗಳ ಹಿಂದೆ ಇದ್ದ ಹಾಗೆ ಈಗ ಇರಲು ಆಗುವುದಿಲ್ಲ.... ಇದು ಸಣ್ಣ ಊರು.... ಮೀರಾ ಗಾಬರಿಯಿಂದ ಇತ್ತಲೇ ನೋಡ್ತಾ ಇದ್ದಾಳೆ...

ಜೋರಾಗಿ ನಕ್ಕ ವಿಶ್ವಾಸ್. ತಲೆ ಹಿಂದಕ್ಕೆ ಹಾಕಿ, ಕಣ್ಣು ಕಿರಿದುಗೊಳಿಸಿ, ಹಲ್ಲೆಲ್ಲಾ ಕಾಣುವ ಹಾಗೆ ನಕ್ಕ, ತಬ್ಬಿಬ್ಬಾಗಿ ಅವನತ್ತಲೇ ನೋಡಿದೆ.

ಎಷ್ಟು ಪರದೆಗಳನ್ನು ಕಟ್ಟಿಕೊಂಡು ಬಿಟ್ಟಿದ್ದೀರಾ? ಯಾಕೆ ಅಷ್ಟೊಂದು ಹೆದರ್ತೀರ್ರಿ?... ಸರಿ ಬಿಡಿ ನಂಗೆ ಹೊತ್ತು ಹೋಗ್ತಾ ಇಲ್ಲ. ನಿಮ್ಮ ಹತ್ತಿರ ಕಥೆ ಪುಸ್ತಕಗಳು ಇವೆಯೇ?..

ಹಾಂ... ಇದೆ. ನೀವು ಯಾವ ತರಹದ ಪುಸ್ತಕಗಳನ್ನು ಓದ್ತಿರಾ?... ಕನ್ನಡ ಓದ್ತಿರಾ?... ಸೀರಿಯಸ್ ಕಾದಂಬರಿಗಳೋ?.. ಲೈಟ್ ಹಾರ್ಟೆಡ್.. ಕೃತಿಗಳೋ..?.. ಹೌದು ಪಾಪಾ.. ನಾಳೆ ಬರ್ತಾ ನಾಲ್ಕು ಪುಸ್ತಕ ತಂದು ಕೊಟ್ಟರೆ ಆಯಿತು... ಬೆಂಗಳೂರಿನಿಂದ ಬಂದವರಿಗೆ ನಮ್ಮೂರಲ್ಲಿ ಹೊತ್ತು ಹೋಗುವುದು ಕಷ್ಟವೇ.

ಅದೆಲ್ಲಾ ಹೇಳೋಕ್ಕಾಗೊಲ್ಲ.. ನಾನೆಲ್ಲಾ ತರಹ ಪುಸ್ತಕಗಳ್ನ ಓದ್ತೀನಿ... ಸೀರಿಯಸ್ ಫಿಲಾಸಫಿ ಇಂದ ಹಿಡಿದು ಸಿಲ್ಲಿ ಡಿಟೆಕ್ಟಿವ್, ಸ್ಟುಪಿಡ್ ರೊಮ್ಯಾಂಟಿಕ್ ಕಾದಂಬರಿಗಳ್ನ ಓದ್ತೀನಿ.. ನಡೀರಿ.. ಈಗ ನಿಮ್ಮ ಜೊತೆ ಬಂದು.. ನಂಗೆ ಬೇಕಾದ ಪುಸ್ತಕಗಳ್ನ ಆರಿಸಿಕೊಳ್ತೀನಿ...

## ಗುರುತು

ಸುಂದರ ಉತ್ಸವ ಮೂರ್ತಿಯ
ಸೌಂದರ್ಯಕ್ಕೆ ಸೋತು
ತಲೆ ತೂಗುವವರೆ ಎಲ್ಲರೂ
ಸಿಂಗರಿಸಿ ಹೊತ್ತು
ಪ್ರದಕ್ಷಿಣೆ ಹಾಕುವವನ
ಗುರುತಿಸುವವರಿಲ್ಲ ಒಬ್ಬರೂ

★ ಶ್ರೀಕೃಷ್ಣಯ್ಯ ಅನಂತಪುರ



ಈಶ್ವರ

ಹೂಂ... ಬನ್ನಿ.. ಮುಂದೆ ಹೆಜ್ಜೆ ಇರಿಸಿದೆ. ಮೀರಾ, ನರಹರಿ ಹೋಗಿಯಾಗಿತ್ತು. ಡ್ರೈವರ್ ಸೂರಿ ಕಾರಿನ ಬಳಿ ಕಾಯುತ್ತಾ ನಿಂತಿದ್ದ ಇವನು ಮನೆಗೆ ಬಂದರೆ ಅತ್ತೆ ಸಿಡಿಸಿಡಿ ಎನ್ನುತ್ತಾರೆ. ಇನ್ನು ನನ್ನ ಪುಸ್ತಕಗಳು ಇರುವುದೋ ನನ್ನ ಬೆಡ್‌ರೂಮಿನಲ್ಲಿ... ಪುಸ್ತಕಗಳ್ನ ತಂದು ಕೊಟ್ರೆ ಒಪ್ಪುವವನಲ್ಲ.. ಸೀದಾ ರೂಮಿಗೆ ಬರುತ್ತಾನೆ. ಬೇಡ ಅನ್ನಲು ಆಗುವುದಿಲ್ಲ...

ತುಂಬಾ ಯೋಚನೆ ಮಾಡಬೇಡ್ರಿ.. ಹೋಟೆಲ್ಲಿಗೆ ತಿರುಗಿ ಡ್ರಾಪ್ ಮಾಡಿ ಅಂತ ಕೇಳಲ್ಲ.. ನಿಧಾನವಾಗಿ ನಡ್ಕೊಂಡು ಹೋಗ್ತೀನಿ...

ಕಾರಿನ ಮುಂದಿನ ಡೋರ್ ತೆಗೆದು ಕುಳಿತು. ಜೋರಾಗಿ ಡೋರ್ ಹಾಕಿದ ಅಲ್ವಾ ಸೂರಿ! ಸೂರಿ ತಾನೇ ನಿಮ್ಮ ಹೆಸರು?..

ಹೂಂ ಎನ್ನುವಂತೆ ತಲೆಯಾಡಿಸಿದ ಸೂರಿ ನಾನು ಹಿಂದೆ ಹತ್ತಿ ಕುಳಿತ ಮೇಲೆ ಬಾಗಿಲು ಹಾಕಿ, ಡ್ರೈವರ್ ಸೀಟಿನಲ್ಲಿ ಕುಳಿತು ಗಾಡಿ ಚಾಲೂ ಮಾಡಿದ.

ನಿಮ್ಮ ಮೇಡಂಗೆ ಕಾರಿನ ಬಾಗಿಲು ಹಾಕೋಕ್ಕೆ ಬರೋಲ್ವಾ ಅಥವಾ ತುಂಬಾ ಜೋರಾಗಿ ಹಾಕ್ತಾರಾ?....

ಯಾಕ್ಸಾರ್? ಅವನ ದನಿಯಲ್ಲಿನ ಆತಂಕ ನೋಡಿ ನಂಗೆ ನಗು ಬಂತು. ವಿಶ್ವಾಸ್ ಏನು ಹೇಳಲು ಶುರುಮಾಡಿದ್ದಾನೆ ಎಂದು ಅರಿವಾಗಿತ್ತು ನನಗೆ. ಆದರೆ ಸೂರಿ.. ಪಾಪಾ..

ಕಾರಲ್ಲಿ ಕೂತ್ರೆ ಬಾಗಿಲು ಹಾಕಿಕೋಬೇಕು.. ತಟ್ಟೆಗೆ ಅನ್ನ, ಹುಳಿ ಹಾಕಿದ್ರೆ ಕಲೆಸಿಕೊಂಡ ತಿನ್ನಬೇಕು.. ಇದೆಲ್ಲಾ ಬೇಸಿಕ್ ನಾಲೆಡ್ಜ್ ಕಣಪ್ಪ... ಎಲ್ಲಾ ಬೇರೆಯವರು ಮಾಡ್ತಾ ಇದ್ರೆ.. ನಮ್ಮ ಜೀವನ ನಾವು ಜೀವಿಸೋಕೆ ಆಗಲ್ಲ.... ಆಗ ನಿರುತ್ಸಾಹ ಬಂದುಬಿಡುತ್ತೆ.. ಅದಕ್ಕೆ..

ಹೇಳುತ್ತಲೇ ಇದ್ದ ವಿಶ್ವಾಸ್, ಸೂರಿ ಕೇಳಿಸಿಕೊಳ್ಳುವುದನ್ನೂ ನಿಲ್ಲಿಸಿದ್ದ ಅನ್ನಿಸುತ್ತೆ. ಕಾರಿನ ಬಾಗಿಲಿಗೂ.. ತಟ್ಟೆಯಲ್ಲಿನ ಅನ್ನಕ್ಕೂ.. ನಮ್ಮ ಜೀವನ ನಾವು ನಡೆಸೋಕೊ.. ಅಥವಾ ಜೀವಿಸಕ್ಕೆ ಏನು ಸಂಬಂಧ ಎಂದು ಅವನಿಗೆ ಅರ್ಥವಾಗದೆ.. ವಿಶ್ವಾಸ್‌ಗೆ ಕೊಂಚ ಸ್ಕ್ರೂ ಲೂಸ್ ಎಂದು ತೀರ್ಮಾನಿಸಿರುತ್ತಾನೆ ಸೂರಿ.

ನಾನು ಮಾತಾಡದೆ ಅವನು ಹೇಳುವುದನ್ನು ಕೇಳುತ್ತಿದ್ದರೂ ಇವನು ಮನೆಗೆ ಬಂದ ಮೇಲೆ ಯಾವ ಪುಸ್ತಕ ಕೊಡುವುದು... ಹೇಗೆ ಕೊಡುವುದು... ಎಂಬ ಆತಂಕ ಶುರುವಾಯಿತು.

ಮನೆಯ ಮುಂದೆ ಕಾರು ನಿಂತಾಗ ಸೂರಿ ಬಾಗಿಲು ತೆಗೆಯುವ ಮುನ್ನವೇ ನಾನೇ ಬಾಗಿಲು ತೆಗೆದು ಕೆಳಗಿಳಿದೆ. ವಿಶ್ವಾಸನತ್ತ ನೋಡದೆ, ತಿರುಗದೆ ಮುಂದಡಿಯಿರಿಸಿದೆ.

ಫಾಸ್ಟ್ ಲರ್ನರ್ ರ್‍ರೀ ನೀವು... ಹಿಂದೆಯೇ ಬಂದ ವಿಶ್ವಾಸ್. ಮುಖ ಕೆಂಪೇರಿದ ಅನುಭವವಾಯಿತು. ತುಟಿ ಕಚ್ಚಿ ಸುಮ್ಮನಾದೆ. ಮಾತಾಡಿದರೆ ದನಿ ತೊದಲಬಹುದು.

ನಾನು ಗೆಸ್ಟು.. ನೀವು ಹೋಸ್ಟು!.. ಒಳಗೆ ಬನ್ನಿ ಅಂತ ಔಪಚಾರಿಕವಾಗಿ ಆದರೂ ಕರೆಯಬೇಕ್ರಿ... ಇಲ್ಲ.. ಇಲ್ಲ.. ವರ್‍ರಿ ಮಾಡ್ಕೊಬೇಡಿ... ನಂಗೆ ಆ ಫಾರ್ಮಾಲಿಟೀಲೆಲ್ಲಾ ನಂಬಿಕೆ ಇಲ್ಲ... ನಿಮ್ಮ ಮಕ್ಕಳು ಮನೇಲಿರ್ತಾರಾ?.. ಅದೇ ನಿಮ್ಮ ತಮ್ಮನ ತರಹ ಕಾಣೋ ಮಗ. ಓ.. ಅತ್ತೆ, ಮಾವ ಎಲ್ಲಾ ಇದಾರಲ್ವಾ?.. ಬರೀ ನಮಸ್ಕಾರ ಅಂತ ಕೈ ಜೋಡಿಸಿದರೆ ಸಾಕಾ.. ಅಥವಾ ಕಾಲು ಮುಟ್ಟಿ ನಮಸ್ಕರಿಸಬೇಕೋ.... ಬೇಗ ಹೇಳ್ರೀ...

ಹಿಂತಿರುಗಿ ಅವನತ್ತ ನೋಡಿದೆ. ಮಾತಾಡದೆ ಸುಮ್ಮನಿರಿ ಸಾಕು. ಯಾರಿಗೂ ಏನೂ ಹೇಳಬೇಕಾಗಿಲ್ಲ... ಮಾಡಬೇಕಾಗಿಲ್ಲ.... ಮೆಲ್ಲನೆ ಹೇಳಿದೆ.

ಬಂದ್ಯಾ... ನಾನು ಅತ್ತೆ ದೇವಸ್ಥಾನಕ್ಕೆ ಹೋಗಬೇಕಿತ್ತು.. ಡ್ರೈವರ್‌ಗೆ ಕಾಯ್ತಾ ಇದ್ವಿ.... ಮನೆ ಬಿಟ್ಟು ಆಚೆ ಹೋದ್ರೆ ಮನೆ ವಿಚಾರ ಮರ್ತೇ ಬಿಡ್ತ್ಯಾ. ಮಕ್ಕಳೂ ನೆನಪಿರೋಲ್ಲ... ನಿನ್ನ ಗಂಡಂಗೆ ಹೇಳಿ ಬೇರೆ ಒಬ್ಬ ಡ್ರೈವರ್‌ನ ಗೊತ್ತು ಮಾಡ್ಕೊ...

ಅತ್ತೆ ಒಳಗಿನಿಂದ ಅನ್ನುತ್ತಲೇ ಹೊರಗೆ ಬಂದರು. ನಾನು ಬಂದಿದ್ದು ಕಾರಿನ ಸದ್ದಿನಿಂದ ತಿಳಿದಿತ್ತು. ಆದರೆ ನನ್ನೊಂದಿಗೆ ವಿಶ್ವಾಸ್ ಬಂದಿರುವುದು ಗೊತ್ತಾಗಲಿಲ್ಲ ಅತ್ತೆಗೆ. ಇಲ್ಲದಿದ್ದರೆ ಹೊಸಬರ ಮುಂದೆ ಹಾಗೆಲ್ಲಾ ಮಾತಾಡುವವರಲ್ಲ ಅತ್ತೆ.

ನಮಸ್ಕಾರಮ್ಮ, ನಾನು ವಿಶ್ವಾಸ್ ಅಂತ ಮುಂದೆ ಹೋಗಿ ಅವರ ಕಾಲು ಮುಟ್ಟಿ ನಮಸ್ಕರಿಸಿದ ವಿಶ್ವಾಸ್. ಅರೆಕ್ಷಣ ಬೆಚ್ಚಿದರೂ ತಟ್ಟನೆ ಸಾವರಿಸಿಕೊಂಡರು.